# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1140 (1229)

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ದಿನಾಂಕ : 13.03.2026

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳು ಯಾವುವು; (ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳ ಕುರಿತು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು); | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ:<br>**ರಾಜ್ಯ ವಲಯ ಯೋಜನೆಗಳು**<br>1. ಮುಖ್ಯಮಂತ್ರಿ ರೈತ ವಿದ್ಯಾನಿಧಿ<br>2. ಕೃಷಿ ಆಯುಕ್ತಾಲಯ<br>3. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ<br>4. ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು<br>5. ರೋಗಗಳಿಂದ ಹಾನಿಗೊಳಗಾದ ಬೆಳೆಗಳಿಗೆ ಪರಿಹಾರ (2023-24ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದೆ)<br>6. ಕೃಷಿ ಪರಿಕರಗಳು & ಗುಣಮಟ್ಟ ನಿಯಂತ್ರಣ ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮಗಳು<br>7. ಹೊಸ ಬೆಳೆ ವಿಮಾ ಯೋಜನೆ<br>8. ಬೆಳೆ ಸಮೀಕ್ಷೆ<br>9. ಕೃಷಿ ಭಾಗ್ಯ<br>10. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ ರಾಜ್ಯದ ಹೆಚ್ಚುವರಿ ಪಾಲಿನ ಅನುದಾನ<br>11. ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ (ಕೃಷಿ ನವೋದ್ಯಮ-2023-24ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದೆ)<br>12. ಕೃಷಿ ಮೂಲಭೂತ ಸೌಕರ್ಯ<br>13. ಕೃಷಿ ಗುಣಮಟ್ಟ ನಿಯಂತ್ರಣ ಬಂಡವಾಳ ವೆಚ್ಚಗಳು (2025-26ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ)<br>**ಕೇಂದ್ರ ಪುರಸ್ಕೃತ ಯೋಜನೆಗಳು**<br>1. ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಠಿಕ ಅಭಿಯಾನ (ಕೃಷೋನ್ನತಿ ಯೋಜನೆ)<br>2. ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ (2025-26ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ)<br>3. NFSNM-ಬೀಜ ಘಟಕಗಳು<br>4. PM-RKVY- ಬೆಳೆ ವೈವಿಧ್ಯೀಕರಣ ಯೋಜನೆ<br>5. ಕೃಷಿ ವಿಸ್ತರಣೆ (ATMA) |

| | | |
|---|---|---|
| | | 6. PM-RKVY- ಕೃಷಿ ಯಾಂತ್ರೀಕರಣ ಉಪ ಅಭಿಯಾನ<br>7. ರಾಷ್ಟ್ರೀಯ ಖಾದ್ಯತೈಲ ಅಭಿಯಾನ-ಎಣ್ಣೆಕಾಳು (NMEO-OS)<br>8. ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (PM-RKVY)<br>9. PM-RKVY-ಮಣ್ಣು ಆರೋಗ್ಯ ಮತ್ತು ಫಲವತ್ತತೆ (PM-RKVY-SH&F)<br>10. ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ<br>11. ಡಿಜಿಟಲ್ ಬೆಳೆ ಸಮೀಕ್ಷೆ (2025-26 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ)<br>12. ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತೆ ಅಭಿಯಾನ (2025-26 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ)<br><br>2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು ಮತ್ತು ಅನುದಾನದ ವಿವರವನ್ನು ಅನುಬಂಧ-1 ರಲ್ಲಿ ಹಾಗೂ ಯೋಜನೆಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ಆರ್ಥಿಕ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ವಿವಿಧ ಯೋಜನೆಗಳಡಿ ಹಾಗೂ ಕೃಷಿ ಇಲಾಖೆಗೆ ಕೇಂದ್ರ ಸರ್ಕಾರ ಮೀಸಲಿಟ್ಟಿರುವ ಹಾಗೂ ಬಿಡುಗಡೆಗೊಳಿಸಿರುವ ಅನುದಾನವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು); | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಕೃಷಿ ಇಲಾಖೆಗೆ ವಿವಿಧ ಯೋಜನೆಗಳಡಿ ನಿಗದಿಪಡಿಸಿರುವ ಹಾಗೂ ಬಿಡುಗಡೆಯಾದ ಅನುದಾನ ವಿವರಗಳನ್ನು ಅನುಬಂಧ-3 ರಲ್ಲಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ವಿವರಗಳನ್ನು ಅನುಬಂಧ-4 ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ:** AGRI/82/AML/2026

(ಎನ್. ಚಲುವರಾಯಸ್ವಾಮಿ)
**ಕೃಷಿ ಸಚಿವರು**

## ಅನುಬಂಧ-1

**(LCQ-1229)**

**2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಜಾರಿಯಲ್ಲಿರುವ ಕೇಂದ್ರದ ಮತ್ತು ರಾಜ್ಯದ ಅಭಿವೃದ್ಧಿ ಯೋಜನೆಗಳು ಹಾಗೂ ಸದರಿ ಯೋಜನೆಗಳಡಿ ಮೀಸಲಿಟ್ಟಿರುವ ಅನುದಾನ, ಬಿಡುಗಡೆಗೊಳಿಸಿರುವ ಅನುದಾನ ಮತ್ತು ವೆಚ್ಚದ ವಿವರ.**

(ರೂ.ಲಕ್ಷಗಳಲ್ಲಿ)

| **2023-24ನೇ ಸಾಲಿನಲ್ಲಿ ಅನುಷ್ಠಾನಗೊಂಡ ಯೋಜನೆಗಳು** | | | | | |
|---|---|---|---|---|---|
| **ಕೇಂದ್ರದ / ರಾಜ್ಯದ ಯೋಜನೆಗಳು** | **ಯೋಜನೆಗಳು** | | **ಮೀಸಲಿಟ್ಟ ಅನುದಾನ** | **ಬಿಡುಗಡೆಯಾದ ಅನುದಾನ** | **ವೆಚ್ಚ** |
| ಕೇಂದ್ರ ವಲಯ ಯೋಜನೆ: | 1. | 10000 ರೈತ ಉತ್ಪಾದಕ ಸಂಸ್ಥೆಗಳ ರಚನೆ ಮತ್ತು ಉತ್ತೇಜನ (*) | 1350.65 | 1350.65 | 1315.73 |
| ಕೇಂದ್ರ ಪುರಸ್ಕೃತ ಯೋಜನೆಗಳು: | 2. | ಜಲಾನಯನ ಅಭಿವೃದ್ಧಿ ಘಟಕ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ -2.0 (WDC-PMKSY - 2.0) (*) | 23886.64 | 21999.96 | 18279.02 |
| | 3. | ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ-RAD RKVY RAFTAAR (*) | 3004.83 | 3003.61 | 2065.99 |
| ರಾಜ್ಯದ ಯೋಜನೆಗಳು | 4. | ವಿಶ್ವಬ್ಯಾಂಕ್ ನೆರವಿನ REWARD ಯೋಜನೆ. (*) | 10000.00 | 10000.00 | 6647.34 |
| | 5. | ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ (FPO's) | 2150.00 | 1975.00 | 1912.25 |
| | 6. | NABARD-ಆರ್.ಐ.ಡಿ.ಎಫ್ ನೆರವಿನ ಜಲಾನಯನ ಅಭಿವೃದ್ಧಿ ಯೋಜನೆಗಳು | 687.43 | 687.40 | 628.98 |
| | | **ಇಲಾಖೆಯ ಒಟ್ಟು** | **41079.55** | **39016.62** | **30849.31** |

- **ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ.**

| **ಇತರೆ ಇಲಾಖೆಯ ಅನುದಾನದಿಂದ ಅನುಷ್ಠಾನಿಸಲ್ಪಟ್ಟ ಯೋಜನೆಗಳು:** | | | **ಬಿಡುಗಡೆ** | **ವೆಚ್ಚ** |
|---|---|---|---|---|
| ಕೇಂದ್ರ ಪುರಸ್ಕೃತ ಯೋಜನೆಗಳು: | 1. | ಅಟಲ್ ಭೂಜಲ್ ಯೋಜನೆ | 1625.00 | 1348.03 |
| | 2. | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು (PMKSY-OI) | 8738.60 | 3541.82 |
| | 3. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ತಡೆ ಅಣೆ ನಿರ್ಮಾಣ (RKVY-CD) | 6995.53 | 6306.21 |
| | 4. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RKVY-RPS) | 2315.30 | 234.36 |
| | | **ಒಟ್ಟು** | **19674.43** | **11430.42** |

| 2024-25ನೇ ಸಾಲಿನಲ್ಲಿ ಅನುಷ್ಠಾನಗೊಂಡ ಯೋಜನೆಗಳು | | | | | |
|---|---|---|---|---|---|
| **ಕೇಂದ್ರದ / ರಾಜ್ಯದ ಯೋಜನೆಗಳು** | **ಯೋಜನೆಗಳು** | | **ಮೀಸಲಿಟ್ಟ ಅನುದಾನ** | **ಬಿಡುಗಡೆಯಾದ ಅನುದಾನ** | **ವೆಚ್ಚ** |
| ಕೇಂದ್ರ ವಲಯ ಯೋಜನೆ: | 1. | 10000 ರೈತ ಉತ್ಪಾದಕ ಸಂಸ್ಥೆಗಳ ರಚನೆ ಮತ್ತು ಉತ್ತೇಜನ (*) | 445.00 | 445.00 | 431.63 |
| ಕೇಂದ್ರ ಪುರಸ್ಕೃತ ಯೋಜನೆಗಳು: | 2. | ಜಲಾನಯನ ಅಭಿವೃದ್ಧಿ ಘಟಕ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ -2.0 (WDC-PMKSY - 2.0) (*) | 11895.54 | 6376.67 | 11035.50 |
| | 3. | ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ- RAD RKVY RAFTAAR (*) | 2393.34 | 2333.34 | 2801.84 |
| ರಾಜ್ಯದ ಯೋಜನೆಗಳು | 4. | ವಿಶ್ವಬ್ಯಾಂಕ್ ನೆರವಿನ REWARD ಯೋಜನೆ. (*) | 15000.00 | 15000.00 | 16101.06 |
| | 5. | ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ (FPO`s) | 2200.00 | 2200.00 | 2194.06 |
| | 6. | NABARD-ಆರ್.ಐ.ಡಿ.ಎಫ್ ನೆರವಿನ ಜಲಾನಯನ ಅಭಿವೃದ್ಧಿ ಯೋಜನೆಗಳು | 305.21 | 305.21 | 241.04 |
| | | **ಇಲಾಖೆಯ ಒಟ್ಟು** | **32239.09** | **26660.22** | **32806.13** |

- **ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ.**

| ಇತರೆ ಇಲಾಖೆಯ ಅನುದಾನದಿಂದ ಅನುಷ್ಠಾನಿಸಲ್ಪಟ್ಟ ಯೋಜನೆಗಳು: | | | **ಬಿಡುಗಡೆ** | **ವೆಚ್ಚ** |
|---|---|---|---|---|
| ಕೇಂದ್ರ ಪುರಸ್ಕೃತ ಯೋಜನೆಗಳು: | 1. | ಅಟಲ್ ಭೂಜಲ್ ಯೋಜನೆ | 3000.00 | 2999.92 |
| | 2. | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು (PMKSY-OI) | 7065.57 | 5951.09 |
| | 3. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ತಡೆ ಅಣೆ ನಿರ್ಮಾಣ (RKVY-CD) | 1163.90 | 1155.96 |
| | 4. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ನೀರು ಸಂರಕ್ಷಣಾ ರಚನೆಗಳು (WHS) | 2500.00 | 2493.97 |
| | 5. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RKVY-RPS) | 2464.91 | 1337.38 |
| | | **ಒಟ್ಟು** | **16194.38** | **13938.32** |

| 2025-26ನೇ ಸಾಲಿನಲ್ಲಿ ಅನುಷ್ಠಾನಗೊಂಡ ಯೋಜನೆಗಳು | | | | | |
|---|---|---|---|---|---|
| ಕೇಂದ್ರದ / ರಾಜ್ಯದ ಯೋಜನೆಗಳು | ಯೋಜನೆಗಳು | | ಮೀಸಲಿಟ್ಟ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
| ಕೇಂದ್ರ ವಲಯ ಯೋಜನೆ: | 1. | 10000 ರೈತ ಉತ್ಪಾದಕ ಸಂಸ್ಥೆಗಳ ರಚನೆ ಮತ್ತು ಉತ್ತೇಜನ (*) | 1236.00 | 800.00 | 281.13 |
| ಕೇಂದ್ರ ಪುರಸ್ಕೃತ ಯೋಜನೆಗಳು: | 2. | ಜಲಾನಯನ ಅಭಿವೃದ್ಧಿ ಘಟಕ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ - (WDC-PMKSY -2.0) | 9289.14 | 8798.33 | 7268.58 |
| | 3. | ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ-RAD RKVY RAFTAAR | 5327.00 | 1816.67 | 1061.01 |
| ರಾಜ್ಯದ ಯೋಜನೆಗಳು | 4. | ವಿಶ್ವಬ್ಯಾಂಕ್ ನೆರವಿನ REWARD ಯೋಜನೆ. (*) | 15000.00 | 15000.00 | 14164.98 |
| | 5. | ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ (FPO's) | 2000.00 | 505.00 | 463.54 |
| | | ಇಲಾಖೆಯ ಒಟ್ಟು | 19352.14 | 26920.00 | 23239.24 |

- ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ.

| ಇತರೆ ಇಲಾಖೆಯ ಅನುದಾನದಿಂದ ಅನುಷ್ಠಾನಿಸಲ್ಪಟ್ಟ ಯೋಜನೆಗಳು: | | | ಬಿಡುಗಡೆ | ವೆಚ್ಚ |
|---|---|---|---|---|
| ಕೇಂದ್ರ ಪುರಸ್ಕೃತ ಯೋಜನೆಗಳು: | 1. | ಅಟಲ್ ಭೂಜಲ್ ಯೋಜನೆ | 700.00 | 696.65 |
| | 2. | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು (PMKSY-OI) | 4270.80 | 2914.75 |
| | 3. | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RKVY-RPS) | 194.40 | 194.39 |
| | | ಒಟ್ಟು | 5165.20 | 3805.79 |

# ಅನುಬಂಧ-2

(LCQ 1229)

## ಜಲಾನಯನ ಅಭಿವೃದ್ಧಿ ಇಲಾಖೆಯ ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಅಭಿವೃದ್ಧಿ ಯೋಜನೆಗಳ ವಿವರ

**ಅ) ಕೇಂದ್ರ ವಲಯ ಯೋಜನೆ:**

**1) 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ:**

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಬಹುದು. ಉತ್ಪಾದಕರ ಸಂಸ್ಥೆಯಾಗಿ ರೈತ ಉತ್ಪಾದಕರ ಸಂಸ್ಥೆಯು ಸ್ಥಳೀಯ ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಸಡಿಲಿಸುವಂತೆ ಮಾಡಬಹುದಾಗಿದೆ. ಈ ಸಂಸ್ಥೆಗಳಿಂದ ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದು, ಕೇಂದ್ರ ಸರ್ಕಾರದಿಂದ ಅನುಧಾನ ನೀಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಉತ್ಪಾದಕರ ಸಂಸ್ಥೆಗೆ 05 ವರ್ಷಗಳ ಅವಧಿಗೆ ಗರಿಷ್ಠ ರೂ.58.00 ಲಕ್ಷಗಳ ವೆಚ್ಚ ಭರಿಸಲು ಅವಕಾಶವಿರುತ್ತದೆ.

**ಆ) ಕೇಂದ್ರ ಪುರಸ್ಕೃತ ಯೋಜನೆಗಳು:**

**1) ಜಲಾನಯನ ಅಭಿವೃದ್ಧಿ ಇಲಾಖೆ ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC- PMKSY 2.0):**

ಯೋಜನೆಯು 2021-22ನೇ ಸಾಲಿನಿಂದ ಅನುಷ್ಠಾನದಲ್ಲಿರುತ್ತದೆ. ರಾಜ್ಯದ 30 ಜಿಲ್ಲೆಗಳ ಆಯ್ದ 78 ತಾಲ್ಲೂಕುಗಳ 3.294 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಮೋದನೆ ನೀಡಿರುತ್ತದೆ. ಯೋಜನೆಯಡಿ ಸಮರ್ಥ ನೀರು ಕೊಯ್ಲು, ಮಣ್ಣಿನ ತೇವಾಂಶ ಸಂರಕ್ಷಣೆ, ಪರ್ಯಾಯ ಬೆಳೆ ವ್ಯವಸ್ಥೆಗಳು, ಕೃಷಿ ಅರಣ್ಯ, ಖುಷ್ಕಿ ತೋಟಗಾರಿಕೆ, ಪಶುಸಂಗೋಪನೆಯ ಮೂಲಕ ಹವಾಮಾನ/ವೈಪರೀತ್ಯ ಮತ್ತು ಬರಗಾಲದ ಅಪಾಯಗಳನ್ನು ಎದುರಿಸುವುದು ಮತ್ತು ರೈತರ ಆದಾಯವನ್ನು ಭದ್ರಪಡಿಸುವುದು; ಯೋಜನಾ ಪ್ರದೇಶಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಥನೀಯ ಬಳಕೆಯ ಮೂಲಕ ಬೆಳೆಗಳು, ಜಾನುವಾರು, ಮೀನುಗಾರಿಕೆ, ಹಾಗೂ ಉತ್ಪಾದನಾ ವ್ಯವಸ್ಥೆಗಳ ಮೂಲಕ ಉತ್ಪಾದಕತೆಯನ್ನು ಸುಧಾರಿಸುವುದು; ಆಸ್ತಿ ರಹಿತ ರೈತರನ್ನು ಗುರುತಿಸುವುದು ಮತ್ತು ಪರ್ಯಾಯ ಜೀವನೋಪಾಯದ ಅವಕಾಶಗಳನ್ನು ಉತ್ತೇಜಿಸುವುದು; ಸುಲಭವಾದ ಕೈಗೆಟುಕುವ ತಂತ್ರಜ್ಞಾನಗಳ ಉತ್ತೇಜನ ಮಾಡುವುದು; ಆದಾಯವನ್ನು ಉತ್ಪಾದಿಸುವ ಅವಕಾಶಗಳಿಗೆ ಹೆಚ್ಚಿನ ಉತ್ತೇಜನ ನೀಡುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದು/ಬಲವರ್ಧಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಈ ಯೋಜನೆಯಡಿ ಸಮತಟ್ಟಾದ ಪ್ರದೇಶದ ಜಲಾನಯನ ಚಟುವಟಿಕೆಗಳ ಅನುಷ್ಠಾನಕ್ಕೆ ರೂ. 22,000 ಪ್ರತಿ ಹೆಕ್ಟೇರ್ ಗೆ, ಮರುಭೂಮಿ ಮತ್ತು ಗುಡ್ಡ ಗಾಡು ಪ್ರದೇಶದಲ್ಲಿ ಜಲಾನಯನ ಚಟುವಟಿಕೆಗಳ ಅನುಷ್ಠಾನಕ್ಕೆ ರೂ. 28,000 ಪ್ರತಿ ಹೆಕ್ಟೇರ್ ಗೆ ಅನುದಾನವನ್ನು ಒದಗಿಸಲಾಗುತ್ತದೆ.

**2) ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD) RKVY-RAFTAAR:**

ಯೋಜನೆಯು ವಿಶೇಷವಾಗಿ ರಾಜ್ಯದ ಎಲ್ಲಾ ಮಳೆಯಾಶ್ರಿತ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ರೈತರ ಜಮೀನಿನಲ್ಲಿ ವಿವಿಧ ಮಾದರಿಯ ಸಮಗ್ರ ಕೃಷಿ ಪದ್ಧತಿಗಳನ್ನು ಹಾಗೂ ಮೌಲ್ಯವರ್ಧಿತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸುವುದು; ರೈತರಿಗೆ ಸಮಗ್ರ ಕೃಷಿ ಪದ್ಧತಿ ಬೆಳೆಗಳು (ರಾಗಿ ಬೆಳೆಗಳು / ಎಣ್ಣೆಬೀಜಗಳು/ ದ್ವಿದಳ ಧಾನ್ಯಗಳು/ತರಕಾರಿಗಳು/ಮೇವು) + ಮರಗಳು (ತೋಟಗಾರಿಕೆ/ ಕೃಷಿ ಅರಣ್ಯ)+ ಜಾನುವಾರುಗಳು ಹಾಲು ಹಸುಗಳು / ಎಮ್ಮೆಗಳು / ಸಣ್ಣ ಮೆಲುಕು ಹಾಕುವ ಪ್ರಾಣಿಗಳು (10 ಪ್ರಾಣಿಗಳು (ಕುರಿ ಅಥವಾ ಮೇಕೆ ಅಥವಾ ಹಂದಿಗಳು) / 50 ಪಕ್ಷಿಗಳು (ಬಾತುಕೋಳಿ) ಅಳವಡಿಸಲು ಉತ್ತೇಜಿಸುವುದು ಹಾಗೂ ಮೀನುಗಾರಿಕೆ, ಜೇನುಕೃಷಿ, ಸೈಲೇಜ್ ತಯಾರಿಕ ಘಟಕ ಮತ್ತು ಎರೆಹುಳುಗೊಬ್ಬರ ಘಟಕಗಳನ್ನು ಇತರೆ ಯೋಜನೆಗಳೊಂದಿಗೆ

ಒಗ್ಗೂಡಿಸುವುದು ಈ ಯೋಜ ಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿ ಪರಿಷ್ಕೃತ ಮಾರ್ಗಸೂಚಿಯನ್ವಯ ಪ್ರತಿ ಕೃಷಿ ಕುಟುಂಬಕ್ಕೆ ರೂ. 30,000/- ಆರ್ಥಿಕ ಸಹಾಯವನ್ನು ನೀಡಲಾಗುವುದು.

## ಅ) ರಾಜ್ಯದ ಯೋಜನೆಗಳು:

### 1) ವಿಶ್ವ ಬ್ಯಾಂಕ್ ನೆರವಿನ REWARD ಯೋಜನೆ:

ರಾಜ್ಯದಲ್ಲಿ ಜಲಾನಯನ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ಜಲಾನಯನ ಅಭಿವೃದ್ಧಿ ಇಲಾಖೆಯಿಂದ ವಿಶ್ವಬ್ಯಾಂಕ್ ನೆರವಿನೊಂದಿಗೆ REWARD ಯೋಜನೆಯನ್ನು 2022-23ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ರಾಜ್ಯದ 25 ಜಿಲ್ಲೆಗಳ ಸುಮಾರು 25 ಲಕ್ಷ ಹೆ. ಮಳೆಯಾಶ್ರಿತ ಪ್ರದೇಶದಲ್ಲಿ ವೈಜ್ಞಾನಿಕ ವಿಧಾನದಲ್ಲಿ ವಿವಿಧ ತಾಂತ್ರಿಕ ಪಾಲುದಾರ ಸಂಸ್ಥೆಗಳ ಮೂಲಕ ಭೂ-ಸಂಪನ್ಮೂಲ ಸಮೀಕ್ಷೆ (Land Resource Inventory-LRI) ಮತ್ತು ಜಲವಿಜ್ಞಾನ ಅಧ್ಯಯನ (Hydrology) ಕೈಗೊಂಡು ಮಣ್ಣಿನ ಭೌತಿಕ ಹಾಗೂ ರಾಸಾಯನಿಕ ಗುಣಧರ್ಮಗಳ ದತ್ತಾಂಶ ಸಂಗ್ರಹಿಸಿ ಡಿಜಿಟಲ್ ಗ್ರಂಥಾಲಯ ಮತ್ತು ಭೂ-ಸಂಪನ್ಮೂಲ ಪೋರ್ಟಲ್‌ನಲ್ಲಿ ಅಳವಡಿಸಲಾಗುತ್ತದೆ.

ಯೋಜನಾ ಪ್ರದೇಶದ ಜಲಾನಯನಗಳಲ್ಲಿ ವೈಜ್ಞಾನಿಕವಾಗಿ ಸಂಗ್ರಹಿಸಿದ ಭೂ-ಸಂಪನ್ಮೂಲ ಮತ್ತು ಜಲ-ವಿಜ್ಞಾನ ಅಧ್ಯಯನದ ದತ್ತಾಂಶಗಳನ್ನು ಮತ್ತು ಶಿಫಾರಸ್ಸುಗಳನ್ನು ಆಧರಿಸಿ ಯೋಜನಾ ವ್ಯಾಪ್ತಿಯ ಅಂದಾಜು 1.00 ಲಕ್ಷ ಹೆ. ಜಲಾನಯನ ಪ್ರದೇಶದಲ್ಲಿ (20 ಉಪ-ಜಲಾನಯನಗಳು) ಜಲಾನಯನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನಾ ವರದಿ ತಯಾರಿಸಿ ಸಂಪೂರ್ಣ ಜಲಾನಯನವನ್ನು ಉಪಚರಿಸಲಾಗುತ್ತದೆ. ಭೂರಹಿತರ ಜೀವನೋಪಾಯಕ್ಕಾಗಿ ಆದಾಯ ಉತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ನೀಡಲಾಗುತ್ತದೆ.

### 2) ನಬಾರ್ಡ್ (ಆರ್.ಐ.ಡಿ.ಎಫ್ ಟ್ರಾಂಚೆ 27) ಜಲಾನಯನ ಅಭಿವೃದ್ಧಿ ಕಾಮಗಾರಿಗಳು (NABARD-RIDF – Tranche -27)

ಈ ಯೋಜನೆಯಡಿ ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಯೋಜನಾ ಪ್ರದೇಶದ 10 ಯೋಜನೆಗಳ ಮೇಲ್ ಸ್ತರಗಳಲ್ಲಿ ಬೋಲ್ಡರ್ ತಡೆ ಹಾಗೂ ರಬಲ್ ತಡೆಗಳನ್ನು ನಿರ್ಮಿಸಲಾಗುವುದು ಕೆಳ ಸ್ತರಗಳಲ್ಲಿ ವೈಜ್ಞಾನಿಕವಾಗಿ ಸೂಕ್ತವಾದ ಸಮುದಾಯ ಮತ್ತು ನಾಲಾ ಪ್ರದೇಶದ ಸ್ಥಳಗಳಲ್ಲಿ ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳಾದ ತಡೆ ಅಣೆ, ಕಿಂಡಿ ಅಣೆ, ನಾಲಾ ಬದು, ಗೋಕಟ್ಟೆ ಮತ್ತು ಇತ್ಯಾದಿ ಸ್ಥಳ ಸೂಕ್ತತೆಗೆ ಅನುಸಾರ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ವಿನ್ಯಾಸಗಳನ್ನು ರಚಿಸಲಾಗುತ್ತದೆ. ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳ ಅಕ್ಕಪಕ್ಕದಲ್ಲಿರುವ ಎಲ್ಲಾ ರೈತರು ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

### 3) ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ:

#### ಅ) ಅಮೃತ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ:

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಬಹುದು. ಉತ್ಪಾದಕರ ಸಂಸ್ಥೆಯಾಗಿ ರೈತ ಉತ್ಪಾದಕರ ಸಂಸ್ಥೆಯು ಸ್ಥಳೀಯ ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಸಡಿಲಿಸುವಂತೆ ಮಾಡಬಹುದಾಗಿದೆ. ಈ ಸಂಸ್ಥೆಗಳಿಂದ ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದು, ರಾಜ್ಯ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

#### ಆ) ರೈತ ಉತ್ಪನ್ನಗಳಿಗೆ ಏಕೀಕೃತ ಬ್ರಾಂಡಿಂಗ್ ಯೋಜನೆ:

- ಹಾಲಿ ಮತ್ತು ಮಾಜಿ ಕೃಷಿ/ತೋಟಗಾರಿಕೆ/ ಪಶು ಸಂಗೋಪನೆ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳನ್ನು ಉದ್ದಿಮೆದಾರರಾಗಿ ಬೆಳೆಯಲು ಪ್ರೋತ್ಸಾಹಿಸುವುದು. ಉತ್ಪನ್ನಗಳ ಉತ್ಪಾದನೆ, ಸಂಸ್ಕರಣೆ ಮತ್ತು

ಮಾರಾಟದಲ್ಲಿ ಹೊಸ ತಾಂತ್ರಿಕತೆ ಅಳವಡಿಸಿಕೊಳ್ಳಲು ಈ ವಿದ್ಯಾರ್ಥಿಗಳ ಸೇವೆಯನ್ನು ಬಳಸಿಕೊಂಡು ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆಗೆ ಶ್ರಮಿಸುವುದು.

- ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮರ್ಥ್ಯ ಬಲವರ್ಧನೆಯಲ್ಲಿ ಸಾಂಸ್ಥಿಕ ಬೆಂಬಲ ನೀಡುವುದು ಹಾಗೂ ಅವುಗಳಿಗೆ ಮುನ್ನಡೆಯಲು ಸಹಾಯ ಮಾಡುವುದು.
- ರೈತರು/ರೈತ ಉತ್ಪಾದಕರ ಸಂಸ್ಥೆಗಳಿಗೆ ಇತರ ಪಾಲುದಾರರೊಂದಿಗೆ ಮಾಹಿತಿ, ಉತ್ಪನ್ನಗಳು, ಸರಬರಾಜು ಮತ್ತು ಮಾರುಕಟ್ಟೆ ಸರಪಳಿ ಹಾಗೂ ಇತರೆ ಸೇವೆಗಳನ್ನು ಒದಗಿಸುವ ವೇದಿಕೆ ಕಲ್ಪಿಸುವುದು.
- ರೈತರ ಉತ್ಪನ್ನಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ 'ನಂದಿನಿ' ಮಾದರಿಯಲ್ಲಿ ಏಕೀಕೃತ ಬ್ರ್ಯಾಂಡಿಂಗ್ ರೂಪಿಸುವುದು.

**ಇ) ರೈತ ಉತ್ಪಾದಕ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ. 20.00 ಲಕ್ಷ ಗಳವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ನೀಡುವ ಯೋಜನೆ.**

ರೈತ ಉತ್ಪಾದಕರ ಸಂಸ್ಥೆಗಳು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ರೈತರ ಉತ್ಪನ್ನಗಳನ್ನು ಕ್ರೋಢೀಕರಿಸಿ, ಮೌಲ್ಯವರ್ಧಿಸಿ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸಂಸ್ಕರಿಸಿದ ಉತ್ಪನ್ನಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಒದಗಿಸುವ ಮೂಲಕ ಹಿಂದುಳಿದ ತಾಲ್ಲೂಕುಗಳ ರೈತ ಉತ್ಪಾದಕರ ಸಂಸ್ಥೆಗಳ ಆದಾಯ ವೃದ್ಧಿಸಲು ಸಹಕಾರಿಯಾಗಲು ಸದರಿ ಯೋಜನೆಯನ್ನು ರೂಪಿಸಲಾಗಿರುತ್ತದೆ.

**ಇತರೆ ಇಲಾಖೆಯ ಅನುದಾನದಿಂದ ಅನುಷ್ಠಾನ ಮಾಡಲಾಗುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳು:**

**1. <u>ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ -ಇತರೆ ಉಪಚಾರಗಳು</u> (PMKSY -OI):**

ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಯೋಜನೆಯನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯ- ಪ್ರತಿ ಹನಿಗೆ ಹೆಚ್ಚು ಬೆಳೆ (PMKSY-PDMC) ಕಾರ್ಯಕ್ರಮದಡಿ ಗರಿಷ್ಠ ಶೇ.20ರಷ್ಟು ಅನುದಾನವನ್ನು ಬಳಸಿಕೊಂಡು ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ- ಇತರೆ ಉಪಚಾರಗಳು (PMKSY-OI) ಯೋಜನೆಯಡಿ ರೈತರಿಗೆ ವೈಯಕ್ತಿಕ ನೀರು ಸಂಗ್ರಹಣಾ ವಿನ್ಯಾಸಗಳ ರಚನೆ, ಕೊಳವೆ ಬಾವಿಗಳ ರಚನೆ, ವೈಯಕ್ತಿಕ ಸಣ್ಣ ಕೆರೆಗಳ ಪುನರುಜ್ಜೀವನ, ನಿಷ್ಕ್ರಿಯ ಕೊಳವೆ ಬಾವಿಗಳ ಪುನರುಜ್ಜೀವನ, ಪೈಪುಗಳ ವಿತರಣೆ ಮತ್ತು ಡೀಸಲ್/ಪೆಟ್ರೋಲ್/ ವಿದ್ಯುತ್ ಚಾಲಿತ/ಪವನ ಚಾಲಿತ/ಸೋಲಾರ್ ನೀರೆತ್ತುವ ಸಾಧನಗಳನ್ನು ಅಳವಡಿಸಿಕೊಳ್ಳಲು ಶೇ. 50 ರಷ್ಟು ಸಹಾಯಧನ ಅಥವಾ ಆಯಾ ಘಟಕಗಳಿಗೆ ನಿಗಧಿಪಡಿಸಿದ ಗರಿಷ್ಠ ಮೊತ್ತ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಒದಗಿಸಲು ಅವಕಾಶವಿರುತ್ತದೆ. ಒಬ್ಬ ವೈಯಕ್ತಿಕ ಫಲಾನುಭವಿಗಳಿಗೆ ಗರಿಷ್ಠ ರೂ.75,000 ದ ವರೆಗೆ ಸಹಾಯಧನದ ಅನುದಾನದ ಲಭ್ಯತೆ ಇರುತ್ತದೆ.

**2. <u>ಅಟಲ್ ಭೂಜಲ್ ಯೋಜನೆ</u>**

ಅಟಲ್ ಭೂಜಲ್ ಯೋಜನೆಯು ಜಲ್ ಶಕ್ತಿ ಮಂತ್ರಾಲಯ, ಭಾರತ ಸರ್ಕಾರದ ಕೇಂದ್ರ ವಲಯ ಯೋಜನೆಯಾಗಿದ್ದು, ಗುರುತಿಸಲಾದ ನೀರಿನ ಶೋಷಿತ ಪ್ರದೇಶಗಳಲ್ಲಿ ಅಂತರ್ಜಲ ನೀರಿನ ಬೇಡಿಕೆ ಮತ್ತು ಸರಬರಾಜು ನಿರ್ವಹಣೆಗೆ ಸಮುದಾಯ ಸಹಭಾಗಿತ್ವದಲ್ಲಿ ಒತ್ತು ನೀಡಲು ರೂಪಿಸಿರುವ ಕಾರ್ಯಕ್ರಮವಾಗಿದೆ. ರಾಜ್ಯದಲ್ಲಿ ಆಯ್ದ 14 ಜಿಲ್ಲೆಗಳ 41 ತಾಲ್ಲೂಕುಗಳಲ್ಲಿ 1199 ಅಂತರ್‌ಜಲ ಶೋಷಿತ ಗ್ರಾಮ ಪಂಚಾಯತಿಗಳಲ್ಲಿ ಕೇಂದ್ರ ಮತ್ತು ರಾಜ್ಯ ಯೋಜನೆಗಳ ಒಗ್ಗೂಡಿಸುವಿಕೆಯ ಮೂಲಕ ಅಂತರ್ಜಲ ನಿರ್ವಹಣೆಯನ್ನು ಉತ್ತೇಜಿಸುವುದು ಯೋಜನೆಯ ಒಂದು ಪ್ರಮುಖ ಉದ್ದೇಶವಾಗಿರುತ್ತದೆ.

**3. <u>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ- ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ತಡೆಅಣೆ /ಕಿಂಡಿಅಣೆ ನಿರ್ಮಾಣ (RKVY-CD)</u>**

ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇಕಡ 60:40 ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ. ರಾಜ್ಯದ 08 ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುವುದು. ತಡೆಅಣೆ/ಕಿಂಡಿ ಅಣೆಯು ಮಳೆ ನೀರು ಕೊಚ್ಚಣೆಯಿಂದ ಹಳ್ಳಗಳಲ್ಲಿ ಹರಿದು ಹೋಗುವ ನೀರನ್ನು ತಡೆಗಟ್ಟಲು ರಚಿಸಲಾಗುವ ಮಳೆ ನೀರು ಕೊಯ್ಲು ರಚನೆಯಾಗಿರುತ್ತದೆ. ಹರಿದು ಹೋಗುವ ಮಳೆ ನೀರನ್ನು ತಡೆಗಟ್ಟುವುದರಿಂದ ಭೂಮಿಯಲ್ಲಿ ನೀರನ್ನು ಇಂಗಿಸಲು ಹೆಚ್ಚು ಸಮಯಾವಕಾಶ ನೀಡುವ ಮೂಲಕ ಅಂತರ್ಜಲ ವೃದ್ಧಿಗೆ ಅನುಕೂಲವಾಗುವುದು.

4. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ನೀರು ಕೊಯಿಲು ರಚನೆ ಕಾರ್ಯಕ್ರಮ (RKVY-WHS):**
2024-25ನೇ ಸಾಲಿನಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನೀರು ಕೊಯ್ಲು ರಚನೆಯನ್ನು ಪ್ರಮುಖವಾಗಿ ಸಮುದಾಯ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ನಾಲೆಯ ಎರಡೂ ಬದಿಗಳಲ್ಲಿ ಜಮೀನು ಹೊಂದಿರುವ ರೈತರು ಮುಖ್ಯ ಫಲಾನುಭವಿಗಳಾಗುತ್ತಾರೆ.

5. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RKVY-RPS)**
ಸಮಸ್ಯಾತ್ಮಕ ಮಣ್ಣಿನ ಪ್ರದೇಶಗಳಲ್ಲಿ ಅಂತರ ಬಸಿ ಕಾಲುವೆ ನಿರ್ಮಾಣ ಮೂಲಕ ಸವಳು ಜವಳು ಮಣ್ಣಿನ ಸುಧಾರಣೆ ಕ್ರಮಗಳನ್ನು ಕೈಗೊಂಡು, ರೈತರಲ್ಲಿ ಮಣ್ಣಿನ ಸಮಸ್ಯೆ ಕುರಿತು ಅರಿವು ಮೂಡಿಸಿ, ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಲು ಉತ್ತೇಜಿಸುವುದು. ಹೊರಹಾಕಿ ಮಣ್ಣಿನ ಗುಣಧರ್ಮವನ್ನು ಕಾಪಾಡುವ ಉಪಚಾರವನ್ನು (ಕಪ್ಪು ಮಣ್ಣಿನಲ್ಲಿ ಅಂದಾಜು ರೂ.1.25 ಲಕ್ಷ ಮತ್ತು ಕೆಂಪು ಮಣ್ಣಿನಲ್ಲಿ ರೂ.0.65 ಲಕ್ಷ ಪ್ರತಿ ಹೆಕ್ಟೇರಿಗೆ) ಕೈಗೊಳ್ಳಲಾಗುವುದು.

## 2023-24, 2024-25 ಮತ್ತು 2025-26ನೇ ಸಾಲಿನ ಕೃಷಿ ಇಲಾಖೆಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಅನುದಾನ ಹಾಗೂ ಬಿಡುಗಡೆಯಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ | 2023-24 | | | | | | 2024-25 | | | | | | 2025-26 (ಫೆಬ್ರವರಿ 2026ರ ಅಂತ್ಯಕ್ಕೆ) | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನ | | | ಬಿಡುಗಡೆಯಾದ ಅನುದಾನ | | | ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನ | | | ಬಿಡುಗಡೆಯಾದ ಅನುದಾನ | | | ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನ | | | ಬಿಡುಗಡೆಯಾದ ಅನುದಾನ | | |
| | | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
| 1 | ಆಹಾರ ಮತ್ತು ಪೌಷ್ಠಿಕ ಭದ್ರತೆ (ಕೃಷೋನ್ನತಿ ಯೋಜನೆ) (FNS) | 17532.93 | 11688.62 | 29221.55 | 17532.93 | 11688.62 | 29221.55 | 21338.64 | 14225.76 | 35564.41 | 17533.00 | 11688.67 | 29221.67 | 16587.27 | 11058.18 | 27645.45 | 9887.99 | 6592.00 | 16479.99 |
| 2 | ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ (NMNF) | 0.00 | 0.00 | 0.00 | 0.00 | 0.00 | 0.00 | | 0.00 | 0.00 | 0.00 | 0.00 | 0.00 | 5110.40 | 3406.93 | 8517.33 | 2924.20 | 1949.47 | 4873.67 |
| 3 | ಬಿತ್ತನೆ ಬೀಜ ಮತ್ತು ಬಿತ್ತನೆ ಸಾಮಗ್ರಿ ಉಪ ಅಭಿಯಾನ (SMSP) | 116.67 | 157.28 | 273.95 | 116.67 | 157.28 | 273.95 | 1395.16 | 748.08 | 2143.24 | 1395.16 | 748.08 | 2143.24 | 934.75 | 6.06 | 940.80 | 469.69 | 3.03 | 472.72 |
| 4 | ಬೆಳೆ ವೈವಿಧ್ಯೀಕರಣ ಯೋಜನೆ (CDP) | 244.00 | 162.67 | 406.66 | 244.00 | 162.67 | 406.66 | 244.00 | 162.67 | 406.67 | 244.00 | 162.67 | 406.67 | 150.00 | 100.00 | 250.00 | 120.00 | 80.00 | 200.00 |
| 5 | ಕೃಷಿ ವಿಸ್ತರಣೆ ಉಪ ಅಭಿಯಾನ (SMAE) | 2037.00 | 1358.00 | 3395.00 | 2037.00 | 1358.00 | 3395.00 | 2100.00 | 1400.00 | 3500.00 | 2100.00 | 1400.00 | 3500.00 | 3000.00 | 2000.00 | 5000.00 | 3000.00 | 2000.00 | 5000.00 |
| 6 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) | 19754.00 | 13169.32 | 32923.32 | 19754.00 | 13169.32 | 32923.32 | 12500.00 | 8333.31 | 20833.31 | 12500.00 | 8333.31 | 20833.31 | 11440.20 | 7626.80 | 19067.00 | 11289.00 | 7526.00 | 18815.00 |
| 7 | ರಾಷ್ಟ್ರೀಯ ಖಾದ್ಯತೈಲ ಅಭಿಯಾನ-ಎಣ್ಣೆಕಾಳು (NMEO-oilseeds) | 1822.82 | 1011.50 | 2834.33 | 1064.07 | 505.67 | 1569.74 | 2125.00 | 1083.33 | 3208.33 | 2125.00 | 1083.33 | 3208.33 | 4763.56 | 2773.16 | 7536.72 | 2381.77 | 1386.58 | 3768.35 |
| 8 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) | 12954.00 | 8636.00 | 21590.00 | 12952.00 | 8634.66 | 21586.66 | 8289.00 | 5526.00 | 13815.00 | 8289.00 | 5526.00 | 13815.00 | 13584.00 | 9056.00 | 22640.00 | 11467.00 | 7644.67 | 19111.67 |
| 9 | ಮಣ್ಣು ಆರೋಗ್ಯ ಮತ್ತು ಫಲವತ್ತತೆ | 1871.00 | 1247.33 | 3118.33 | 1871.00 | 1247.33 | 3118.33 | 621.00 | 414.00 | 1035.00 | 621.00 | 414.00 | 1035.00 | 743.00 | 495.33 | 1238.33 | 743.00 | 495.33 | 1238.33 |
| 10 | ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ(PMFME) | 3034.20 | 5352.78 | 8386.98 | 2775.60 | 5179.38 | 7954.98 | 6000.00 | 6468.33 | 12468.33 | 6000.00 | 5816.04 | 11816.04 | 11581.60 | 9092.00 | 20673.60 | 10000.00 | 6982.54 | 16982.54 |
| 11 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ | 15750 | 27973.00 | 43723.00 | 15750.00 | 22500.00 | 38250.00 | 22474.00 | 40227.07 | 62701.07 | 18924.91 | 32016.60 | 50941.51 | 15783.00 | 28309.86 | 44092.86 | 15783.00 | 22522.00 | 38305.00 |
| 12 | ಡಿಜಿಟಲ್ ಬೆಳೆ ಸಮೀಕ್ಷೆ (Digital Crop Survey) | | | 0.00 | | | 0.00 | | | 0.00 | | | 0.00 | 257.03 | 171.36 | 428.39 | 257.03 | 171.36 | 428.39 |
| 13 | ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತೆ ಅಭಿಯಾನ (Mission for Aatmanirbharta in Pulses) | | | 0.00 | | | 0.00 | | | 0.00 | | | 0.00 | 1997.45 | 1331.63 | 3329.08 | 1997.45 | 1331.63 | 3329.08 |
| | **ಕೇಂದ್ರ ಪುರಸ್ಕೃತ ಯೋಜನೆಗಳು - ಒಟ್ಟು** | **75116.62** | **70756.50** | **145873.13** | **74097.27** | **64602.93** | **138700.19** | **77086.80** | **78588.55** | **155675.36** | **69732.07** | **67188.70** | **136920.77** | **85932.26** | **75427.31** | **161359.57** | **70320.14** | **58684.60** | **129004.73** |

## ಅನುಬಂಧ-4

(LCQ-1229)

**2023-24, 2024-25 ಮತ್ತು 2025-26ನೇ ಆರ್ಥಿಕ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ/ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಡಿ ಮೀಸಲಿಟ್ಟಿರುವ ಅನುದಾನ ಹಾಗೂ ಬಿಡುಗಡೆಗೊಳಿಸಿರುವ ಅನುದಾನದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆ | ಕೇಂದ್ರದ ಪಾಲಿನ ಅನುದಾನ | | | | | |
|---|---|---|---|---|---|---|---|
| | | 2023-24 | | 2024-25 | | 2025-26 | |
| | | ಮೀಸಲಿಟ್ಟ ಅನುದಾನ | ಬಿಡುಗಡೆಯಾದ ಅನುದಾನ | ಮೀಸಲಿಟ್ಟ ಅನುದಾನ | ಬಿಡುಗಡೆಯಾದ ಅನುದಾನ | ಮೀಸಲಿಟ್ಟ ಅನುದಾನ | ಬಿಡುಗಡೆಯಾದ ಅನುದಾನ |
| **ಅ)** | **ಕೇಂದ್ರ ವಲಯ ಯೋಜನೆ:** | | | | | | |
| 1. | 10000 ರೈತ ಉತ್ಪಾದಕ ಸಂಸ್ಥೆಗಳ ರಚನೆ ಮತ್ತು ಉತ್ತೇಜನ | 1350.65 | 1350.65 | 445.00 | 445.00 | 1236.00 | 800.00 |
| **ಆ)** | **ಕೇಂದ್ರ ಪುರಸ್ಕೃತ ಯೋಜನೆಗಳು:** | | | | | | |
| 1. | ಜಲಾನಯನ ಅಭಿವೃದ್ಧಿ ಘಟಕ- ಪ್ರಧಾನ ಮಂತ್ರಿ ಕೃಷಿ ಸಂಚಯಿ ಯೋಜನೆ 2.0 (WDC- PMKSY 2.0) | 14331.98 | 13199.98 | 7137.32 | 3826.00 | 5573.48 | 5279.00 |
| 2. | ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD RKVY) | 1802.97 | 1801.97 | 1436.00 | 1400.00 | 3196.20 | 1090.00 |
| | **ಒಟ್ಟು** | **17485.60** | **16352.60** | **9018.32** | **5671.00** | **10005.68** | **7169.00** |